KATK900005432019

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ತಿಪಟೂರು**

**ಎಸ್.ಸಿ.ಸಂಖ್ಯೆ: 10039/2019**

**ಪ್ರಮಾಣೀಕರಿಸಿದ ದಿನಾಂಕ: 23.07.2024**

**ಚಾ.ಸಾ-03**

**ಫ್ರಾ.ಸಾ-18**

| | |
|---|---|
| ಹೆಸರು | ಹೊನ್ನೇಗೌಡ |
| ತಂದೆ ಹೆಸರು | ಶಿವಣ್ಣ |
| ವಯಸ್ಸು | 56 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ತಂಡಗ ಗ್ರಾಮ |

**ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಸುಮ ಹಾಗೂ ಗಜೇಂದ್ರರವರ ಪರಿಚಯ ಇರುವುದಿಲ್ಲ. ಮೃತ ಸುರೇಶ್ ರವರ ಪರಿಚಯ ಇರುವುದಿಲ್ಲ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿ ಗೋವಿಂದರಾಜು ಈತನನ್ನು ನೋಡಿರುವುದಿಲ್ಲ. ನಾನು ತಂಡಗ ಗ್ರಾಮದಲ್ಲಿ ಹುಟ್ಟಿದಾಗಿನಿಂದ ವಾಸವಿರುತ್ತೇನೆ. ಸದರಿ ಸುಮ ಹಾಗೂ ಗಜೇಂದ್ರ ಹಾಗೂ ಮೃತ ಸುರೇಶ್ ರವರು ತಂಡಗ ಗ್ರಾಮದವರಾಗಿದ್ದು, ಅವರ ಪರಿಚಯ ಇರುವುದಿಲ್ಲ. ಡಿಸೆಂಬರ್ 2019 ರಲ್ಲಿ ನನಗೆ ಅಪಘಾತವಾಗಿದ್ದು, ನನಗೆ ತಲೆಗೆ ಪೆಟ್ಟಾಗಿದ್ದು, ನಾನು ಕೋಮದಲ್ಲಿ ಇದ್ದು ನನಗೆ ಯಾವುದೂ ಸರಿಯಾಗಿ ನೆನಪು ಇರುವುದಿಲ್ಲ. ತುರುವೇಕೆರೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ

ಪಡೆದುಕೊಂಡ ಬಗ್ಗೆ ನೆನಪು ಇರುವುದಿಲ್ಲ. ಸದರಿ ಸುರೇಶ್ ರವರು ಹೇಗೆ ಮೃತಪಟ್ಟಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

ದಿಃ16.02.2019 ರಂದು ರಾತ್ರಿ ಸುಮಾರು 8–30 ಗಂಟೆಯಲ್ಲಿ ನಾನು ಊಟ ಮಾಡಿ ನಮ್ಮ ಮನೆಯ ಸಮೀಪ ರಸ್ತೆಯಲ್ಲಿ ಇರುವ ಸೇತುವೆಯ ಬಳಿ ಕುಳಿತಿರುವಾಗ ..................................................... ನಾನು ನಮ್ಮ ಸ್ನೇಹಿತರು ಕರೆದದ್ದರು ........................................... ನಾನು ನಮ್ಮ ಮನೆಯ ಮುಂದೆ ನಿಂತಿದ್ದಾಗ ಗೋವಿಂದರಾಜು ತಮ್ಮ ಬಾಬ್ತು ಮೋಟಾರ್ ಸೈಕಲ್ ನಲ್ಲಿ ಅವರ ಮನೆ ಕಡೆ ಹೋದನು ಎಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ17.02.2019 ರಂದು ಬೆಳಿಗ್ಗೆ ಸುಮಾರು 7–00 ಗಂಟೆ ಸಮಯದಲ್ಲಿ ನಾನು ಎದ್ದು, ಮನೆಯಿಂದ ಹೊರಗೆ ಬಂದಾಗ ಸುರೇಶ್ ಶ್ರೀರಾಮಮಂದಿರ ಮುಂಭಾಗ ಸತ್ತು ಹೋಗಿರುತ್ತಾನೆ ಎಂದು ಜನರು ಹೋಗಿ ನೋಡುತ್ತಿದ್ದರು .......................... ದಿಃ16.02.2019 ರಂದು ರಾತ್ರಿ ಸುರೇಶ್ ರವರನ್ನು ಕೊಲೆ ಮಾಡಿ ಆ ದಿನ ಶ್ರೀರಾಮಮಂದಿರ ಮುಂದೆ ಕುಳಿತಿದ್ದ ನಮ್ಮ ಊರಿನ ಗೋವಿಂದರಾಜು ರವರು ಅಗಿರುತ್ತಾರೆ ಎಂದು ತಿಳಿಯಿತು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಗ್ರಾಮದಲ್ಲಿ ವಿಚಾರ ತಿಳಿಯಲಾಗಿ ಸುರೇಶ್ ಮತ್ತು ಗೋವಿಂದರಾಜು ರವರು ಈಗ್ಯೆ 5–6 ವರ್ಷದ ಹಿಂದೆ ........... ದಿಃ16.02.2019 ರಂದು ರಾತ್ರಿ 9–15 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ

ಶ್ರೀರಾಮಮಂದಿರದ ಹತ್ತಿರ ಎಡಭಾಗದ ತಲೆಗೆ ರಿಪೀಸ್ ದೊಣ್ಣೆಯಿಂದ ಹೊಡೆದು ಕೊಲೆ ಮಾಡಿರುತ್ತಾರೆ ಹಾಗೂ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗೋವಿಂದರಾಜು ರವರು ಸಹ ತಂಡಗ ಗ್ರಾಮದವರು ಎಂದರೆ ಸರಿಯಲ್ಲ. ಸದರಿ ದಿಃ16.03.2019 ರ ಹೇಳಿಕೆಯನ್ನು ನಿಪಿ–16 ಎಂದು ಗುರುತಿಸಲಾಯಿತು. ಸದರಿ ಆರೋಪಿ ನಮ್ಮ ಊರಿನವರು ಆಗಿದ್ದ ಕಾರಣ ನಾನು ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತಾರೆ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

Sd/-

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**